**ದಿನಾಂಕಃ 07.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ್ ಎ ಕೆ ರವರಿಂದಃ**

ಓ ಎಸ್ ನಂ. 6/2004, ಆರ್ ಎ ನಂ.3/2008 ಹಾಗೂ ಎಫ್ ಡಿ ಪಿ ಪ್ರಕರಣಗಳಲ್ಲಿ ವಾದಿಯು ಪಕ್ಷಗಾರರಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ ಅವರು ಖರೀದಿ ಮಾಡಿದ ನಂತರ ತಿಳಿದು ಬಂದ ನಂತರ ದಾವೆಯನ್ನು ಹೂಡಿರುತ್ತೇನೆ. ಆರ್ ಎ ನಂ.3/2008 ರ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ನಂ. 1694/2013 ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಅದು ಈಗಲೂ ಚಾಲ್ತಿಯಲ್ಲಿರುತ್ತದೆ ಎಂರೆ ಸರಿ ಹಾಗಾ ಸದರಿ ಮೇಲ್ಮನವಿಯಲ್ಲಿಯೂ ಸಹ ವಾದಿಯು ಪಕ್ಷಗಾರರಾಗಿರುವುದಿಲ್ಲ ಗೊತ್ತಿರುವುದಿಲ್ಲ.

ವಾದಿಯು ದಾವಾಸ್ವತ್ತನ್ನು ಖರೀದಿ ಮಾಡುವ ಮಾತುಕತೆ ನಡೆಸುತ್ತಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾಗಮ್ಮ ರವರು ವಾದಿಗೆ ದಿ.19.11.2020 ರಲ್ಲಿ ದಾವಾಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದರೆ ಗೊತ್ತಿರುವುದಿಲ್ಲ ಅವರು ಮನೆಯನ್ನು ಕೆಡವಲು ಬಂದಾಗ ಗೊತ್ತಾಗಿರುತ್ತದೆ. ವಾದಿಗೆ ನೋಟಿಸನ್ನು ನೀಡಿರುತ್ತೇನೆ, ದಿನಾಂಕ ನೆನಪಿರುವುದಿಲ್ಲ. ಆ ರೀತಿ ನೋಟಿಸ ಕೊಡೆದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ನಾಗಮ್ಮರವರು ಅವರ ಜೀವನದ ಕೊನೆಯ ಅವಧಿಯಲ್ಲಿ ಅವರಿಗೆ ಬೇಕಾಗುವ ಖರ್ಚು-ವೆಚ್ಚಗಳಿಗೆ ಅವರೆದ್ದೆ ಆದ ಸ್ವಯಾರ್ಜಿತ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ ಅದು ಅವರ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ.

ಓ ಎಸ್ 6/2004 ವಜಾಗೊಂಡಿರುತ್ತದೆ ಎಂದರೆ ಸರಿ. ಆರ್ ಎ ನಂ.3/2008 ರ ಆದೇಶದ ವಿರುದ್ಧ ನಾಗಮ್ಮ ಮತ್ತು ಅಶ್ವಥನಾರಾಯಣಪ್ಪ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ನಂ. 1694/2013 ರಲ್ಲಿ ಮೇಲ್ಮನವಿಯಲ್ಲಿ ಆರ್ ಎ ನಂ.3/2008 ರ ತೀರ್ಪಿನ ಮೇಲೆ ತಡೆಯಾಜ್ಞೆ ಹೊರೆಡಿಸಿರುತ್ತಾರೆಂದರೆ ಗೊತ್ತಿರುವುದಿಲ್ಲ. ಆರ್ ಎ ನಂ.3/2008 ರ ಆದೇಶದಂತೆ ಸ್ವತ್ತಿನ ಖಾತೆಯಲ್ಲಿ ಬದಲಾವಣೆ ಮಾಡಿರುವುದಿಲ್ಲ ಕಾರಣ ನ್ಯಾಯಾಲಯದಿಂದ ನಮ್ಮ ಪಾಲು ಹಂಚಿಕೆಯಾಗಿರುವುದಿಲ್ಲ ಹಾಗೂ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣಕ್ಕೆ ಖಾತೆ ಬದಲಾವಣೆ ಮಾಡಬೇಡಿ ಎಂದು ನಗರಸಭೆಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ, ಆದರೆ ದಿನಾಂಕ ನೆನಪಿರುವುದಿಲ್ಲ, ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ಅರ್ಜಿಯನ್ನು ಸ್ವೀಕರೆಸಿ ನಗರಸಭೆಯವರು ಈಗಾಗಲೇ ಖಾತೆಯನ್ನು ಮಾಡಲಾಗಿರುತ್ತದೆ ಆ ಕಾರಣ ನ್ಯಾಯಾಲಯದಿಂದ ಡಿಕ್ರಿಯನ್ನು ಸಲ್ಲಿಸಿದ್ದ ಪಕ್ಷದಲ್ಲಿ ಅದರ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹಿಂಬರಹ ನೀಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ.

ನಾಗಮ್ಮ ರವರು ಅವರ ಸ್ವಯಾರ್ಜಿತ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಹಾಗೂ ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಈಗಲೂ ಸಹ ಪ್ರಕರಣವು ಬಾಕಿ ಇದ್ದು ನನ್ನ ಹೆಸರಿಗೆ ಸಂಪೂರ್ಣವಾಗಿ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿಗೂ ಮತ್ತು ನನಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**